# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1094 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 22.02.2024 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಅಬಕಾರಿ ಇಲಾಖೆಯ ಒಟ್ಟು ಕಚೇರಿಗಳ ಸಂಖ್ಯೆಯೆಷ್ಟು; (ರಾಜ್ಯ, ವಿಭಾಗೀಯ, ಜಿಲ್ಲಾ, ತಾಲ್ಲೂಕು ಹಾಗೂ ತನಿಖಾ ಠಾಣೆ ಸಹಿತಿ ವಿವರ ನೀಡುವುದು) | ರಾಜ್ಯದಲ್ಲಿ ಅಬಕಾರಿ ಇಲಾಖೆಯಲ್ಲಿ ಒಟ್ಟು 543 ಕಛೇರಿಗಳು ಇದ್ದು, ವಿವರಗಳನ್ನು **ಅನುಬಂಧದಲ್ಲಿ** ಇರಿಸಿದೆ. |
| ಆ | ಅಬಕಾರಿ ಇಲಾಖೆಯ ವರ್ಗಾವಣೆ ನಿಯಮಗಳೇನು; ಈ ಇಲಾಖೆಯ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳಲ್ಲಿ ಎಷ್ಟು ಜನರು ಧೀರ್ಘ ಸಮಯದಿಂದ ಒಂದೇ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ; (ವಿವರ ನೀಡುವುದು) | ಸರ್ಕಾರದ ವರ್ಗಾವಣೆಯ ಮಾರ್ಗಸೂಚಿಯಲ್ಲಿ ನಿಗಧಿಪಡಿಸಿರುವಂತೆ ಅಬಕಾರಿ ಇಲಾಖೆಯ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದಕ್ಕೆ ಕನಿಷ್ಠ ಎರಡು ವರ್ಷಗಳು, ಗ್ರೂಪ್-ಸಿ ವೃಂದಕ್ಕೆ ಕನಿಷ್ಠ ನಾಲ್ಕು ವರ್ಷಗಳು ಮತ್ತು ಗ್ರೂಪ್-ಡಿ ವೃಂದಕ್ಕೆ ಕನಿಷ್ಠ ಏಳು ವರ್ಷಗಳು ಪೂರೈಸಿದ ಅಧಿಕಾರಿ/ನೌಕರರುಗಳನ್ನು ಗರಿಷ್ಠ ಶೇ.6 ರಂತೆ ವರ್ಗಾಯಿಸಲು ಕ್ರಮವಹಿಸಲಾಗುತ್ತಿದೆ.<br><br>ಅಬಕಾರಿ ಇಲಾಖೆಯ ಕಛೇರಿಗಳಲ್ಲಿ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದಲ್ಲಿ ಕನಿಷ್ಠ ಎರಡು ವರ್ಷಗಳಲ್ಲಿ ಒಟ್ಟು 78 ಅಧಿಕಾರಿಗಳು ಹಾಗೂ ಗ್ರೂಪ್-ಸಿ ವೃಂದದಲ್ಲಿ ಕನಿಷ್ಠ ನಾಲ್ಕು ವರ್ಷಗಳಲ್ಲಿ ಒಟ್ಟು 629 ಅಧಿಕಾರಿಗಳು ಹಾಗೂ ಹತ್ತು ವರ್ಷಗಳ ಮೇಲ್ಪಟ್ಟು 707 ನೌಕರರುಗಳು ಒಂದೇ ಕಛೇರಿಯಲ್ಲಿ ದೀರ್ಘ ಸಮಯದಿಂದ ಕಾರ್ಯನಿರ್ವಹಿಸುತ್ತಿದ್ದಾರೆ. |
| ಇ | ತನಿಖಾ ಠಾಣೆ ಸಹಿತ ಅಬಕಾರಿ ಇಲಾಖೆಯ ಕಚೇರಿಗಳಲ್ಲಿ 10 ವರ್ಷಗಳಿಗಿಂತ ಹೆಚ್ಚು ಸಮಯ ಒಂದೇ ಕಚೇರಿಯಲ್ಲಿ ಕಾರ್ಯನಿರ್ವಹಿಸಿದ ಅಧಿಕಾರಿ ಸಿಬ್ಬಂದಿಗಳನ್ನು ವರ್ಗಾವಣೆ ಮಾಡದಿರಲು ಕಾರಣವೇನು; ಸರ್ಕಾರವು ಒಂದು ಅವಧಿ ನಿರ್ಧರಿಸಿ ಹೆಚ್ಚು ಸಮಯ ಒಂದೇ ಕಚೇರಿಯಲ್ಲಿ ಕಾರ್ಯನಿರ್ವಹಿಸಿದ ಅಬಕಾರಿ ಅಧಿಕಾರಿ ಸಿಬ್ಬಂದಿಗಳನ್ನು ಯಾವಾಗ ವರ್ಗಾವಣೆಗೆ ಕ್ರಮವಹಿಸುವುದು; (ವಿವರ ನೀಡುವುದು) | |

| | | |
|---|---|---|
| ಈ | ರಾಜ್ಯದ ಗಡಿಗಳಲ್ಲಿ ತನಿಖಾ ಠಾಣೆಯ ಸಿಬ್ಬಂದಿಗಳು ಸಾರ್ವಜನಿಕರೊಂದಿಗೆ ವ್ಯವಹರಿಸುವಾಗ ಅನುಸರಿಸಬೇಕಾದ ಕಾರ್ಯವಿಧಾನಗಳು ಯಾವುವು; ಈ ಕುರಿತು ಸರ್ಕಾರದ ಮಾರ್ಗಸೂಚಿಗಳು ಇವೆಯೇ; (ವಿವರ ನೀಡುವುದು) | ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 2(21) ರಂತೆ "ಸ್ಥಳ" ವ್ಯಾಖ್ಯಾನದಡಿ ಸ್ಥಳಗಳಲ್ಲಿ "ವಾಹನ"ವು ಕೂಡ ಒಳಗೊಂಡಿರುತ್ತದೆ. ಅಬಕಾರಿ ತನಿಖಾ ಠಾಣೆಗಳ ಮೂಲಕ ಹಾದು ಹೋಗುವ ವಾಹನಗಳನ್ನು ತಪಾಸಣೆ ನಡೆಸಿ ಅಬಕಾರಿ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಅಬಕಾರಿ ವಸ್ತುಗಳನ್ನು ಸಾಗಾಣಿಕೆ ಮಾಡುತ್ತಿರುವುದು ಕಂಡು ಬಂದಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ, 1965ರ ಅನುಸಾರ ಕ್ರಮ ಜರುಗಿಸಲಾಗುತ್ತದೆ. |
| ಉ | ತನಿಖಾ ಠಾಣೆಯ ಸಿಬ್ಬಂದಿಗಳು ಪರಿಶೀಲನೆಯ ನೆಪದಲ್ಲಿ ಚಾಲಕರೊಂದಿಗೆ ಹಾಗೂ ಸಾರ್ವಜನಿಕರೊಂದಿಗೆ ಅಸಭ್ಯತೆಯಿಂದ ವರ್ತಿಸುತ್ತಿರುವ ಬಗ್ಗೆ ಹಾಗೂ ಯಾವುದೇ ಅನಧಿಕೃತ ವಸ್ತು ಸಾಗಿಸದಿದ್ದರೂ ವಾಹನ ಚಾಲಕರನ್ನು ವಾಹನದಿಂದ ಇಳಿಸಿ ಸಿಸಿ ಟಿ.ವಿ ಕವರೇಜ್ ಇಲ್ಲದ ಕಡೆ ಕರೆಸಿ ಅವರಿಂದ ಹಣ ವಸೂಲಿ ಮಾಡುವುದನ್ನು ತಡೆಯಲು ಸರ್ಕಾರ ಏನು ಕ್ರಮ ಕೈಗೊಂಡಿದೆ; (ವಿವರ ನೀಡುವುದು) | ಅಬಕಾರಿ ಇಲಾಖೆಯಲ್ಲಿ 40 ತನಿಖಾ ಠಾಣೆಗಳಿದ್ದು, ಪ್ರಸ್ತುತ 27 ತನಿಖಾ ಠಾಣೆಗಳಲ್ಲಿ ಈಗಾಗಲೇ ಸಿ.ಸಿ.ಟಿ.ವಿ ಕ್ಯಾಮೆರಗಳನ್ನು ಅಳವಡಿಸಲಾಗಿರುತ್ತದೆ, ಯಾವುದೇ ಅನಧಿಕೃತ ವಸ್ತು ಸಾಗಿಸದಿದ್ದರೂ ವಾಹನ ಚಾಲಕರನ್ನು ವಾಹನದಿಂದ ಇಳಿಸಿ ಸಿ.ಸಿ.ಟಿ.ವಿ ಕವರೇಜ್ ಇಲ್ಲದ ಕಡೆ ಕರೆಸಿ ಅವರಿಂದ ಹಣ ವಸೂಲಿ ಮಾಡುವುದರ ಬಗ್ಗೆ ಯಾವುದೇ ದೂರುಗಳು ಇದುವರೆಗೂ ಸ್ವೀಕೃತಿಗೊಂಡಿರುವುದಿಲ್ಲ. ಉಳಿದ 13 ತನಿಖಾ ಠಾಣೆಗಳಿಗೆ ಸಿ.ಸಿ.ಟಿ.ವಿ ಕ್ಯಾಮರಗಳನ್ನು ಅಳವಡಿಸಲು ಕ್ರಮ ವಹಿಸಲಾಗುವುದು. |
| ಊ | ರಾಜ್ಯದ ಗಡಿಗಳಲ್ಲಿ ತನಿಖಾ ಠಾಣೆಗಳಲ್ಲಿ ಅಕ್ರಮ ವಸೂಲಿ ತಡೆಯಲು ಬಾಡಿ ಕೆಮಾರ ಒದಗಿಸುವ ಬಗ್ಗೆ ಹಾಗೂ ಮಹಿಳಾ ಪ್ರಯಾಣಿಕರಿಗೆ ಮುಜುಗರ ತಪ್ಪಿಸಲು ಮಹಿಳಾ ಸಿಬ್ಬಂದಿ ನೇಮಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ? (ವಿವರ ನೀಡುವುದು) | ಅಬಕಾರಿ ತನಿಖಾ ಠಾಣೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಬಾಡಿ ಕ್ಯಾಮರಗಳನ್ನು ಇಲಾಖಾ ವತಿಯಿಂದ ಸರಬರಾಜು ಮಾಡದಿರುವ ಹಿನ್ನೆಲೆಯಲ್ಲಿ ಸಿಬ್ಬಂದಿಗಳು ಬಾಡಿ ಕ್ಯಾಮರ ಧರಿಸಿ ಕಾರ್ಯನಿರ್ವಹಿಸುತ್ತಿರುವುದಿಲ್ಲ.<br><br>ಪ್ರಸ್ತುತ, ಅಬಕಾರಿ ತನಿಖಾ ಠಾಣೆಗಳಲ್ಲಿ ಮಹಿಳಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. |

| | | |
|---|---|---|
| | | ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಬಕಾರಿ ಪೇದೆ (ಪುರುಷ) ಮತ್ತು ಅಬಕಾರಿ ಪೇದೆ (ಮಹಿಳೆ) ಎಂದು ಪ್ರತ್ಯೇಕವಾಗಿ ವರ್ಗೀಕರಿಸಲಾಗಿದ್ದು, ಅದರಲ್ಲಿ ರಾಜ್ಯ ವ್ಯಾಪಿ ಮಹಿಳಾ ಅಬಕಾರಿ ಪೇದೆ ವೃಂದಕ್ಕೆ 118 ಹುದ್ದೆಗಳು ಮಾತ್ರ ಮಂಜೂರಾಗಿರುತ್ತದೆ. ಮಂಜೂರಾದ ಹುದ್ದೆಗಳ ಪೈಕಿ 104 ಮಹಿಳಾ ಪೇದೆಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಮಹಿಳಾ ಪೇದೆಗಳ ಕೊರತೆಯಿಂದಾಗಿ ತನಿಖಾ ಠಾಣೆಗಳಿಗೆ ಮಹಿಳಾ ಸಿಬ್ಬಂದಿಗಳನ್ನು ತೈನಾತಿಸಿರುವುದಿಲ್ಲ.<br><br>ನಿಯಮಗಳ ಪ್ರಕಾರ ಮಹಿಳಾ ಪ್ರಯಾಣಿಕರ ಅಂಗಶೋಧನೆಯನ್ನು ಮಾಡಬೇಕಾದಲ್ಲಿ ಮಹಿಳಾ ಸಿಬ್ಬಂದಿಯಿಂದಲೇ ನಡೆಸಬೇಕಾಗುತ್ತದೆ. ಮಹಿಳಾ ಪ್ರಯಾಣಿಕರು ಅಬಕಾರಿ ವಸ್ತುಗಳು ಹೊಂದಿದ್ದಾರೆ ಎಂಬ ಖಚಿತ ಮಾಹಿತಿಯಿದ್ದು ಅಂಗಶೋಧನೆ ನಡೆಸಬೇಕಾದಂತಹ ಸಂದರ್ಭದಲ್ಲಿ ಹತ್ತಿರದ ಮಹಿಳಾ ಪೊಲೀಸ್ ಸಿಬ್ಬಂದಿ ಅಥವಾ ಅಬಕಾರಿ ಮಹಿಳಾ ಪೇದೆಯನ್ನು ಸ್ಥಳಕ್ಕೆ ಕರೆಸಿ ನಿಯಮಾನುಸಾರ ಅಂಗಶೋಧನೆ ನಡೆಸಲು ಕ್ರಮವಹಿಸಲಾಗುತ್ತಿದೆ. |

**ಆಇ 37 ಇಎಲ್‌ಕ್ಯೂ 2024**

(ಆರ್.ಬಿ.ತಿಮ್ಮಾಪುರ)

ಅಬಕಾರಿ ಸಚಿವರು.

## ಅನುಬಂಧ

| ಕ್ರ.ಸಂ | ಕಛೇರಿ ವಿವರ | | | |
|---|---|---|---|---|
| 01 | ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು | 01 | | |
| 02 | ಅಬಕಾರಿ ಅಪರ ಆಯುಕ್ತರು (ಜಾರಿ ಮತ್ತು ಅಪರಾದ)<br>ಬೆಳಗಾವಿ ಕೇಂದ್ರ ಸ್ಥಾನ, ಬೆಳಗಾವಿ | 01 | | |
| 03 | **ಅಬಕಾರಿ ಜಂಟಿ ಆಯಕ್ತರುಗಳು** (ಜಾರಿ ಮತ್ತು ತನಿಖೆ)<br>ಬೆಂಗಳೂರು (ಉತ್ತರ / ದಕ್ಷಿಣ), ಬೆಂಗಳೂರು ಗ್ರಾಮಾಂತರ, ಬೆಳಗಾವಿ, ದಾವಣಗೆರೆ, ಹೊಸಪೇಟೆ, ಕಲಬುರಗಿ, ಮಂಗಳೂರು ಮತ್ತು ಮೈಸೂರು ವಿಭಾಗಗಳು | 09 | | |
| 04 | **ಅಬಕಾರಿ ಉಪ ಆಯುಕ್ತರುಗಳು**<br>ಬೆಂಗಳೂರು ನಗರ ಜಿಲ್ಲೆ 1,2,3,4,5,6,7,8, ಬೆಂಗಳೂರು ಗ್ರಾಮಾಂತರ, ಬಾಗಲಕೋಟೆ, ಬಳ್ಳಾರಿ, ಬೆಳಗಾವಿ ಉತ್ತರ, ಬೆಳಗಾವಿ ದಕ್ಷಿಣ, ವಿಜಯಪುರ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ದಕ್ಷಿಣ ಕನ್ನಡ, ಕಲಬುರಗಿ, ಗದಗ, ಹಾಸನ, ಹಾವೇರಿ, ಕೊಡಗು, ಕೊಪ್ಪಳ, ಕೋಲಾರ, ಮಂಡ್ಯ, ಮೈಸೂರು ನಗರ, ಮೈಸೂರು ಗ್ರಾಮಾಂತರ, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ವಿಜಯನಗರ ಮತ್ತು ಯಾದಗಿರಿ ಜಿಲ್ಲೆಗಳು | 40 | | |
| 05 | ಡಿಸ್ಟಿಲರಿ ಮತ್ತು ಬ್ರೀವರಿ ಘಟಕಗಳು | 1 | ಅಬಕಾರಿ ಉಪ ಆಯುಕ್ತರು | 02 |
| | | 2 | ಅಬಕಾರಿ ಅಧೀಕ್ಷಕರು | 19 |
| | | 3 | ಅಬಕಾರಿ ಉಪ ಅಧೀಕ್ಷಕರು | 20 |
| | | 4 | ಅಬಕಾರಿ ನಿರೀಕ್ಷಕರು | 02 |
| | | | ಒಟ್ಟು | **43** |
| 06 | ವೈನರಿ ಘಟಕಗಳು | 1 | ಅಬಕಾರಿ ಅಧೀಕ್ಷಕರು | 01 |
| | | 2 | ಅಬಕಾರಿ ಉಪ ಅಧೀಕ್ಷಕರು | 04 |
| | | 3 | ಅಬಕಾರಿ ನಿರೀಕ್ಷಕರು | 22 |
| | | | ಒಟ್ಟು | **27** |
| 07 | ಕೆ.ಎಸ್.ಬಿ.ಸಿ.ಎಲ್ ಡಿಪೋಗಳು | 1 | ಅಬಕಾರಿ ಅಧೀಕ್ಷಕರು | 08 |
| | | 2 | ಅಬಕಾರಿ ಉಪ ಅಧೀಕ್ಷಕರು | 18 |
| | | 3 | ಅಬಕಾರಿ ನಿರೀಕ್ಷಕರು | 45 |
| | | | ಒಟ್ಟು | **71** |
| 08 | ಎಂ.ಸಿ.ಎ ಬೆಂಗಳೂರು | 01 | | |
| 09 | ಉಪ ವಿಭಾಗಗಳು | 75 | | |
| 10 | ವಲಯಗಳು | 233 | | |
| 11 | ರಾಸಾಯನಿಕ ಪ್ರಯೋಗಾಲಯ, ಬೆಂಗಳೂರು ಮತ್ತು ಧಾರವಾಡ | 02 | | |
| 12 | ತನಿಖಾ ಠಾಣೆಗಳು | 40 | | |
| | ಒಟ್ಟು | **543** | | |

**ಆಇ 37 ಇಎಲ್‌ಕ್ಯೂ 2024**